**ಸಾಕ್ಷಿಯನ್ನು ದಿಃ09.08.2018 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ ಎಂ ವಿ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

2ನೇ ಪ್ರ2ವಾದಿ ಕಡೆಯಿಂದ ನಾನಸ ದಾವಾ ಸ್ವತ್ತನ್ನು ಖರೀದಿ ಮಾಡಿದ ಬಗ್ಗೆ ಕರೀದಿ ಕಾಗದ ಪತ್ರದ ನ್ಯಾಯಾಲಯದ ದೃಡೀಕೃತ ನಕಲು ಪತ್ರವನ್ನು ಹಾಜರುಪಡಿಸಿದ್ದು ಅದರ ಅಸಲು ಪತ್ರ ಅಸಲು ದಾವಾ ಸಂಖ್ಯೆ 230-2013 ರಲ್ಲಿ ಹಾಜರುಪಡಿಸಿರುತ್ತೇನೆ. ಆದ ಕಾರಣ ಸದರಿ ದಾಖಲೆಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಿ ಡಿ 1 ರ ಆಧಾರದ ಮೇಲೆ ನನ್ನ ಹೆಸರಿಗೆ ಎಂಆರ್ ಬಂದಿದ್ದು ಅದನ್ನು ನಿ ಡಿ 2 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 3 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಡಿ 3 ರಿಂದ 5 ಎಂದು, ಅಸಲು ದಾವಾ ಸಂಖ್ಯೆ 230-2013ರ ಆರ್ಡರ್ ಶೀಟ್, ವಾದ ಪತ್ರ, ನನಗೆ ಮನೆ ಕಟ್ಟಲು ಸಂಬಂದಪಟ್ಟ ಪ್ರಾಧಿಕಾರದವರು ಪರವಾನಗಿ ನೀಡಿದ್ದು, ಅದನ್ನು ಹಾಜರುಪಡಿಸಿದ್ದು, ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಒಂದು ಡಿಮ್ಯಾಂಡ್ ರಿಜಿಸ್ಟರ್‌ನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಡಿ 6 ರಿಂದ 9 ಎಂದು, ದಾವಾ ಸ್ವತ್ತಿಗೆ ನಾನು ಕಂದಾಯ ಕಟ್ಟಿದ ಬಗ್ಗೆ ಕಂದಾರ ರಸೀದಿಯನ್ನು ನಿ ಡಿ 10 ಎಂದು ಗುರುತಿಸಲಾಯಿತು. ನಿ ಡಿ 1 ರಿಂದ 10 ದಾಖಲೆಗಳು ನ್ಯಾಯಾಲಯದ ದೃಡೀಕೃತ ದಾಖಲೆಗಳಾಗಿರುತ್ತವೆ. ವಾದಿ ಮತ್ತು 1ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಗಳ ಬಗ್ಗೆ ಪಟ್ಟಾ ಪುಸ್ತಕದ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅದರಲ್ಲಿ ದಾವಾ ಸ್ವತ್ತು ಇರುವುದಿಲ್ಲ, ಸದರಿ ದಾಖಲೆಯನ್ನು ನಿಡಿ 11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**